ಆ) **2008–09**ನೇ ಸಾಲಿನಲ್ಲಿ ಬಿ.ಡಿ.ಎ. ವತಿಯಿಂದ ಹೊಸದಾಗಿ ಎಷ್ಟು ಬಡಾವಣೆಗಳನ್ನು ನಿರ್ಮಿಸುವ ಹಾಗೂ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡುವ ಉದ್ದೇಶವಿದೆ;

ಸರ್ಕಾರವು ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನು ರಚಿಸಲು ಅನುಮೋದನೆ ನೀಡಿದ್ದು, ಈ ಬಡಾವಣೆ ರಚಿಸಲು ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಾರಂಭಿಕ ಅಧಿಸೂಚನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೊರಡಿಸಿರುತ್ತದೆ. ಈ ಬಡಾವಣೆಯಲ್ಲಿ ಸುಮಾರು **65,000** ನಿವೇಶನಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಈ ಕೆಳಕಂಡ **4** ಬಡಾವಣೆಗಳನ್ನು ರಚಿಸಲು ಯೋಜಿಸಲಾಗಿದೆ.

1) ಶಿವರಾಮ ಕಾರಂತ ಬಡಾವಣೆ.
2) ಡಿ.ದೇವರಾಜ ಅರಸು ಬಡಾವಣೆ.
3) ಕೆ.ಸಿ.ರೆಡ್ಡಿ ಬಡಾವಣೆ.
4) ಎಸ್.ನಿಜಲಿಂಗಪ್ಪ ಬಡಾವಣೆ.

ಇ) ಹಂಚಿಕೆ ಮಾಡತಕ್ಕ ನಿವೇಶನ ದಾರರು ಹತ್ತು ವರ್ಷಗಳ ಕಾಲ ಯಾರಿಗೂ ಪರಭಾರೆ ಅಥವಾ ಮಾರಾಟ ಮಾಡದೇ ಇರುವ ನಿಬಂಧನೆ ವಿಧಿಸಲಾಗಿದೆಯೇ;

ಹೌದು.

ಈ) ಈ ನಿಬಂಧನೆಯನ್ನು ಮೂರು ವರ್ಷಕ್ಕೆ ಇಳಿಸುವ ಅಥವಾ ರದ್ದು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಸದ್ಯಕ್ಕೆ ಇರುವುದಿಲ್ಲ.

**1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (398)266**
**2) ಸದಸ್ಯರ ಹೆಸರು : ಶ್ರೀ ವಿ.ಸೋಮಣ್ಣ**
**3) ಉತ್ತರಿಸುವ ಸಚಿವರು : (ಶ್ರೀ.ಜಿ.ಜನಾರ್ಧನರೆಡ್ಡಿ)**
**: ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು**

ಅ) HAL ವಿಮಾನ ನಿಲ್ದಾಣಕ್ಕಾಗಿ ಸರ್ಕಾರ ಖರ್ಚು ಮಾಡಿದ ಹಣವೆಷ್ಟು?

HAL ವಿಮಾನ ನಿಲ್ದಾಣ ಭಾರತ ಸರ್ಕಾರದ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (AAI) ನಿಯಂತ್ರಣಕ್ಕೊಳಪಟ್ಟಿದೆ ಆದುದರಿಂದ ರಾಜ್ಯ ಸರ್ಕಾರವು ಹಣ ಖರ್ಚು ಮಾಡಿರುವುದಿಲ್ಲ.

ಆ) ಈ ವಿಮಾನ ನಿಲ್ದಾಣದಲ್ಲಿ ಕಡಿಮೆ ದೂರದ ವಿಮಾನಗಳ ಸಂಚಾರವನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೆ;

ಇಲ್ಲ.

ಇ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಉದ್ಭವಿಸುವುದಿಲ್ಲ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (399)267**
**ಸದಸ್ಯರ ಹೆಸರು : ಶ್ರೀ.ವಿ.ಸೋಮಣ್ಣ**
**ಉತ್ತರಿಸುವ ಸಚಿವರು : (ಶ್ರೀ.ಆರ್.ಅಶೋಕ್)**
**: ಮಾನ್ಯ ಸಾರಿಗೆ ಸಚಿವರು**

ಅ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಹಾಲಿ ಸಂಚರಿಸುವ ಆಟೋರಿಕ್ಷಾಗಳ ಸಂಖ್ಯೆ ಎಷ್ಟು?

**75,247**

ಆ) ಹೊಸದಾಗಿ ಆಟೋರಿಕ್ಷಾ ಪರವಾನಗಿ ನೀಡಲು ಸರ್ಕಾರ ನಿರ್ಧರಿಸಿದೆಯೇ?

ಹೌದು.

ಇ) ಹಾಗಿದ್ದಲ್ಲಿ, ಹೊಸದಾಗಿ ಎಷ್ಟು ಆಟೋರಿಕ್ಷಾಗಳಿಗೆ ಪರವಾನಗಿಗಳನ್ನು ನೀಡಲಾಗುವುದು?

ದಿನಾಂಕ: **25–3–2008**ರಲ್ಲಿ ಸರ್ಕಾರವು ಹೊಸದಾಗಿ **5000** ಆಟೋರಿಕ್ಷಾ ರಹದಾರಿಗಳನ್ನು ನೀಡಲು ಮಂಜೂರಾತಿ ನೀಡಿರುತ್ತದೆ.

ಈ) ಈ ಪರವಾನಗಿಯನ್ನು ನೀಡುವಾಗ ಅನುಸರಿಸುವ ಮಾನದಂಡಗಳೇನು?

ಮೋಟಾರು ವಾಹನ ಕಾಯ್ದೆ **1988**ರ ಕಲಂ **74** ರಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ನು ಮತ್ತು ಈ ಕೆಳಕಂಡ ಷರತ್ತು ವಿಧಿಸಿ ರಹದಾರಿ ಗಳನ್ನು ನೀಡಲಾಗುತ್ತದೆ.

1. ವಾಯುಮಾಲಿನ್ಯ ಮತ್ತು ಶಬ್ದಮಾಲಿನ್ಯ ಉಂಟುಮಾಡದೆ ಇರುವಂತಹ ಹೊಸ 4 ಸ್ಟ್ರೋಕ್ ಇಂಜಿನ್ ಉಳ್ಳ ಮತ್ತು ಅಧಿಕೃತ ಎಲ್.ಪಿ.ಜಿ.ಕಿಟ್ ಅಳವಡಿಸಿರುವ ವಾಹನಗಳಿಗೆ ಮಾತ್ರ ರಹದಾರಿಗಳನ್ನು ನೀಡುವುದು.
2. ಆಟೋರಿಕ್ಷಾ ಓಡಿಸಲು ಚಾಲನಾ ಅನುಜ್ಞಾಪತ್ರ ಹೊಂದಿರತಕ್ಕಂತಹ ಅಭ್ಯರ್ಥಿಗಳಿಗೆ ರಹದಾರಿಗಳನ್ನು ಮಂಜೂರು ಮಾಡುವುದು.
3. ರಹದಾರಿಗಾಗಿ ಅರ್ಜಿ ಸಲ್ಲಿಸುವವರು ವಿಳಾಸ ಪುರಾವೆಗಾಗಿ ಕೆಳಕಂಡ ಯಾವುದಾದರೂ ಒಂದು ದಾಖಲೆಯನ್ನು ಒದಗಿಸುವುದು.

1)ವೋಟರ್ ಐಡೆಂಟಿಟಿ ಕಾರ್ಡ್, 2)ಪಡಿತರ ಚೀಟಿ, 3)ಪಾಸ್‌ಪೋರ್ಟ್,
4)ಆದಾಯ ತೆರಿಗೆ ಸಲ್ಲಿಸಿರುವ ಪ್ರತಿ, 5)ಎಲೆಕ್ಟ್ರಿಸಿಟಿ ಬಿಲ್, 6)ವಾಟರ್ ಬಿಲ್.

ಉ) ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿನ ಶಾಸಕರ ಅಭಿಪ್ರಾಯವನ್ನು ಪಡೆದು ಆ ಕ್ಷೇತ್ರದಲ್ಲಿನ ಅರ್ಹರಿಗೆ ಈ ಪರವಾನಗಿಯನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?